**B** SL. No. : H

ಒಟ್ಟು ಪ್ರಶ್ನೆಗಳ ಸಂಖ್ಯೆ : 25 + 25 ]

Total No. of Questions : 25 + 25 ]

**CCE RR**

**Revised & Unrevised**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

**ಸಂಕೇತ ಸಂಖ್ಯೆ : 98-K** **Code No. : 98-K**

# ವಿಷಯ : ಕರ್ನಾಟಕ ಸಂಗೀತ / ಹಿಂದೂಸ್ಥಾನಿ ಸಂಗೀತ — ಶಾಸ್ತ್ರ ವಿಭಾಗ

# Subject : CARNATIC MUSIC / HINDUSTANI MUSIC — THEORY

**( ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater )**

**( ಕನ್ನಡ ಭಾಷಾಂತರ / Kannada Version )**

**( ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು )**

ದಿನಾಂಕ : 24. 06. 2019 ] [ Date : 24. 06. 2019

ಸಮಯ : ಮಧ್ಯಾಹ್ನ 2-00 ರಿಂದ 3-45 ರವರೆಗೆ ] [ Time : 2-00 P.M. to 3-45 P.M.

ಗರಿಷ್ಠ ಅಂಕಗಳು : 40 ] [ Max. Marks : 40

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 25 + 25 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**

ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

# (ಕರ್ನಾಟಕ ಸಂಗೀತ)

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $8 \times 1 = 8$

1. ರೂಪಕ ತಾಳದ ತಾಳಾಂಗ ಚಿಹ್ನೆ

   (A) | | O O  (B) | O O

   (C) O |  (D) | O |

2. 'ಗುರು ಗುಹ' ಎಂಬ ಅಂಕಿತದೊಂದಿಗೆ ಕೃತಿರಚನೆ ಮಾಡಿದವರು

   (A) ತ್ಯಾಗರಾಜರು  (B) ಮುತ್ತುಸ್ವಾಮಿ ದೀಕ್ಷಿತರು

   (C) ಮುತ್ತಯ್ಯ ಭಾಗವತರು  (D) ಮೈಸೂರು ವಾಸುದೇವಾಚಾರ್ಯರು

3. 'ನಾಗಸ್ವರ' ಒಂದು ಸುಷಿರವಾದ್ಯ ಏಕೆಂದರೆ,

   (A) ಇದು ಒಂದು ಮಂಗಳ ವಾದ್ಯ

   (B) ಇದು ಉದ್ದನೆಯ ವಾದ್ಯ

   (C) ಇದು ಒಂದು ಶೃತಿ ವಾದ್ಯ

   (D) ಇದು ಗಾಳಿಯ ಸಹಾಯದಿಂದ ನುಡಿಯುವ ವಾದ್ಯ

4. ಸಂಗೀತವು ಈ ಕೆಳಗಿನ ಅಂಶದೊಂದಿಗೆ ಸಂಬಂಧವನ್ನು ಹೊಂದಿದೆ

   (A) ಅರ್ಥಶಾಸ್ತ್ರ  (B) ಪಾಕಶಾಸ್ತ್ರ

   (C) ಗಣಿತಶಾಸ್ತ್ರ  (D) ರಸಾಯನಶಾಸ್ತ್ರ

5. ಶಂಕರಾಭರಣ ರಾಗವು ಮೇಚಕಲ್ಯಾಣಿ ರಾಗಕ್ಕಿಂತ ಒಂದು ಸ್ವರದಲ್ಲಿ ಭಿನ್ನವಾಗಿದೆ. ಅದೆಂದರೆ,

   (A) ಪಂಚಮ  (B) ಮಧ್ಯಮ

   (C) ದೈವತ  (D) ನಿಷಾದ

6. ಕರ್ನಾಟಕ ಹಾಗೂ ಹಿಂದೂಸ್ಥಾನಿ ಸಂಗೀತ ಪದ್ಧತಿಗಳ ನಡುವೆ ಇರುವ ಒಂದು ಸಾಮ್ಯತೆ ಎಂದರೆ

(A) ಎರಡೂ ಪದ್ಧತಿಗಳಲ್ಲಿ ತಂಬೂರಿ ಶೃತಿ ವಾದ್ಯವಾಗಿದೆ

(B) ಎರಡೂ ಪದ್ಧತಿಗಳಲ್ಲಿ ಗಾಯನಶೈಲಿ ಒಂದೇ ಆಗಿದೆ

(C) ಎರಡೂ ಪದ್ಧತಿಗಳಲ್ಲಿ ಕೃತಿಗಳು ಒಂದೇ ರೀತಿಯಲ್ಲಿದೆ

(D) ಎರಡೂ ಪದ್ಧತಿಗಳಲ್ಲಿ ಪಕ್ಕವಾದ್ಯಗಳು ಒಂದೇ ಆಗಿದೆ

7. ಪುರಂದರದಾಸರ ಅಂಕಿತ

(A) ವಿಜಯ ವಿಠಲ (B) ಗೋಪಾಲ ವಿಠಲ

(C) ಪುರಂದರ ವಿಠಲ (D) ದಾಸ ವಿಠಲ

8. ರಾಗಲಕ್ಷಣವನ್ನು ತಿಳಿಸುವ ಸಾಹಿತ್ಯವುಳ್ಳ ಗೀತೆಗಳು

(A) ಲಕ್ಷಣಗೀತೆಗಳು (B) ಪಿಳ್ಳಾರಿ ಗೀತೆಗಳು

(C) ಸಾಮಾನ್ಯ ಗೀತೆಗಳು (D) ಸ್ವರಗೀತೆಗಳು

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ :** $8 \times 1 = 8$

9. 'ಆರೋಹಣ' ಎಂದರೇನು ?

10. ಪುರಂದರದಾಸರನ್ನು 'ಕರ್ನಾಟಕ ಸಂಗೀತ ಪಿತಾಮಹ' ಎಂದು ಕರೆಯಲು ಕಾರಣವೇನು ?

11. 'ರಾಗ' ಎಂದರೇನು ?

12. ಗುರುವು ತ್ಯಾಗರಾಜರನ್ನು ಹೇಗೆ ಹೊಗಳಿದರು ?

13. ತ್ರಿಸ್ಥಾಯಿಗಳನ್ನು ಹೆಸರಿಸಿ.

14. ಪಿಳ್ಳಾರಿ ಗೀತೆಗಳು ಯಾವ ರಾಗದಲ್ಲಿ ರಚನೆಯಾಗಿವೆ ?

15. ಕಾಂಭೋಜಿ ರಾಗವನ್ನು ಭಾಷಾಂಗ ರಾಗವೆಂದು ಕರೆಯುವುದೇಕೆ ?

16. ರೂಪಕ ತಾಳ ಮತ್ತು ಏಕತಾಳಗಳ ನಡುವಿನ ಒಂದು ವ್ಯತ್ಯಾಸ ತಿಳಿಸಿ.

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $7 \times 2 = 14$

17. ತಿಮ್ಮಪ್ಪನು 'ಕನಕ'ನಾದದ್ದು ಹೇಗೆ ?

18. ಕೃತಿ ಮತ್ತು ಕೀರ್ತನೆಗಳ ನಡುವಿನ ಒಂದು ಸಾಮ್ಯತೆ ಮತ್ತು ಒಂದು ವ್ಯತ್ಯಾಸ ತಿಳಿಸಿ.

19. ಸಂಗೀತವು ಮನೋವಿಜ್ಞಾನದೊಂದಿಗೆ ಹೇಗೆ ಸಂಬಂಧವನ್ನು ಹೊಂದಿದೆ ?

20. ಮಾರ್ಗ ಮತ್ತು ದೇಶೀ ಸಂಗೀತಗಳ ನಡುವಿನ ಒಂದು ವ್ಯತ್ಯಾಸವನ್ನು ತಿಳಿಸಿ.

21. ಜಲತರಂಗ್ ವಾದ್ಯವನ್ನು ಜಲವಾದ್ಯವೆಂದು ಹೇಗೆ ಸಮರ್ಥಿಸುವಿರಿ ?

22. ಈ ಕೆಳಗಿನ ಸ್ವರಗಳನ್ನು ಪ್ರಕೃತಿ ಹಾಗೂ ವಿಕೃತಿ ಸ್ವರಗಳಾಗಿ ವಿಂಗಡಿಸಿ :

    ರಿಷಭ, ಪಂಚಮ, ಮಧ್ಯಮ, ನಿಷಾದ, ಷಡ್ಜ, ಧೈವತ

23. ಈ ಕೆಳಗಿನ ಜನಕ–ಜನ್ಯ ರಾಗಗಳನ್ನು ವರ್ಗೀಕರಿಸಿ :

    ಹರಿಕಾಂಭೋಜಿ, ಕಾಂಭೋಜಿ, ಕಾಮವರ್ಧಿನಿ, ಹಂಸಧ್ವನಿ

IV. **ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

24. ತ್ರಿಪುಟ ತಾಳದ ಸ್ವರಾಲಂಕಾರವನ್ನು ಸ್ವರಲಿಪಿಯೊಂದಿಗೆ ವಿನ್ಯಾಸಗೊಳಿಸಿ ಬರೆಯಿರಿ. 4

25. ಲಲಿತಕಲೆಗಳಲ್ಲಿ ಸಂಗೀತವು ಶ್ರೇಷ್ಠ ಕಲೆಯೆಂಬುದನ್ನು ಸ್ಪಷ್ಟೀಕರಿಸಿ. 6

# (ಹಿಂದೂಸ್ಥಾನಿ ಸಂಗೀತ)

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $8 \times 1 = 8$

1. ಸ್ವರಗಳ ಏರಿಕೆ ಕ್ರಮ

   (A) ಆರೋಹಣ (B) ಅವರೋಹಣ

   (C) ತಾರಸ್ಥಾಯಿ (D) ಮಂದ್ರಸ್ಥಾಯಿ

2. ಗಾಯಕರು ಮತ್ತು ವಾದಕರು ಆಧಾರವಾಗಿಟ್ಟುಕೊಳ್ಳುವ ಆಧಾರ ಷಡ್ಜವೇ

   (A) ನಾದ (B) ಅನಾಹತನಾದ

   (C) ಸ್ವರ (D) ಶೃತಿ

3. ರಾಗದ ಛಾಯೆಯನ್ನು ಕೂಡಲೇ ಪ್ರತಿಬಿಂಬಿಸುವ ಸ್ವರ ಸಮೂಹವೇ

   (A) ರಾಗ (B) ಮುಖ್ಯಾಂಗ

   (C) ಉತ್ತರಾಂಗ (D) ಪೂರ್ವಾಂಗ

4. ಸಂಗೀತ ವಾದ್ಯಗಳಿಂದ ಹೊಮ್ಮುವ ನಾದ ಆಹತನಾದ ಏಕೆಂದರೆ,

   (A) ಇದು ನಿಯಮಿತ ಕಂಪನಗಳಿಂದ ಉಂಟಾಗಿದೆ

   (B) ಇದು ಅನಿಯಮಿತ ಕಂಪನಗಳಿಂದ ಉಂಟಾಗಿದೆ

   (C) ತನ್ನಷ್ಟಕ್ಕೆ ತಾನೇ ಉಂಟಾದ ನಾದವಾಗಿದೆ

   (D) ಇದು ಕರ್ಕಶ ನಾದವಾಗಿದೆ

5. ದೇಸ್ ರಾಗದ ಗಾಯನ ಸಮಯ

   (A) ರಾತ್ರಿ ಮೂರನೇ ಪ್ರಹರ (B) ರಾತ್ರಿ ಮೊದಲನೇ ಪ್ರಹರ

   (C) ರಾತ್ರಿ ಎರಡನೇ ಪ್ರಹರ (D) ರಾತ್ರಿ ನಾಲ್ಕನೇ ಪ್ರಹರ

6. ದುರ್ಗಾರಾಗವು ಔಡವ–ಔಡವ ರಾಗವಾಗಿದೆ ಏಕೆಂದರೆ,

(A) ಆ ರಾಗದಲ್ಲಿ ಆರು ಮತ್ತು ಆರು ಸ್ವರಗಳಿವೆ

(B) ಆ ರಾಗದಲ್ಲಿ ಏಳೇಳು ಸ್ವರಗಳಿವೆ

(C) ಆ ರಾಗದಲ್ಲಿ ಐದು ಮತ್ತು ಐದು ಸ್ವರಗಳಿವೆ

(D) ಆ ರಾಗದಲ್ಲಿ ಐದು ಮತ್ತು ಏಳು ಸ್ವರಗಳಿವೆ

7. ಹಿಂದೂಸ್ಥಾನಿ ಸಂಗೀತದ ಪ್ರಸಿದ್ಧ ಗಾಯಕರೆಂದರೆ

(A) ಎಂ.ಎಸ್. ಸುಬ್ಬಲಕ್ಷ್ಮಿ (B) ಬಾಲಮುರಳಿ ಕೃಷ್ಣ

(C) ಪಂಡಿತ್ ಭೀಮಸೇನ ಜೋಷಿ (D) ತ್ಯಾಗರಾಜರು

8. ತಾಳದಲ್ಲಿ ಹುಸಿಯನ್ನು ಗುರುತಿಸಲು ಬಳಸುವ ಚಿಹ್ನೆ

(A) X (B) O

(C) – (D) S

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ :** $8 \times 1 = 8$

9. ಬಿಬಾಸ್ ರಾಗದ ವಾದಿ ಸ್ವರವನ್ನು ಹೆಸರಿಸಿ.

10. ಮಲ್ಲಿಕಾರ್ಜುನ ಮನಸೂರರು ಯಾವಾಗ ಜನಿಸಿದರು ?

11. ಜೀವನ್‌ಪುರಿ ರಾಗದ ಆರೋಹಣ ಮತ್ತು ಅವರೋಹಣದಲ್ಲಿ ಕಂಡುಬರುವ ವ್ಯತ್ಯಾಸ ತಿಳಿಸಿ.

12. ತಂಬೂರಿಯನ್ನು ಒಂದು ಶೃತಿವಾದ್ಯವೆಂದು ಕರೆಯುತ್ತಾರೆ. ಏಕೆ ?

13. ಪಂಡಿತ್ ವಿಷ್ಣುದಿಗಂಬರ ಫಲೂಸ್ಕರ್‌ರವರ ಸ್ವರಲಿಪಿಯಲ್ಲಿ ಸ್ವರಗಳ ಮೇಲೆ ಲಂಬರೇಖೆಯನ್ನು ಎಳೆಯುತ್ತಾರೆ. ಏಕೆ ?

14. ಠೇಕಾ ಎಂದರೇನು ?

15. ಋಷಿ ಮುನಿಗಳ ಓಂಕಾರವು ಅನಾಹತನಾದವಾಗಿದೆ. ಕಾರಣ ಕೊಡಿ.

16. ಭೈರವಿ ರಾಗವನ್ನು ಥಾಟ್‌ರಾಗ ಎನ್ನುವರು ಏಕೆ ?

III. **ಈ ಕೆಳಗಿನ ಪ್ರಶ್ನೆಗಳಿಗೆ *ಎರಡರಿಂದ ಮೂರು* ವಾಕ್ಯಗಳಲ್ಲಿ ಉತ್ತರಿಸಿ :** $7 \times 2 = 14$

17. ಖಮಾಜ್ ಮತ್ತು ತಿಲಂಗ್ ರಾಗಕ್ಕೂ ಇರುವ ಒಂದೊಂದು ಸಾಮ್ಯತೆ ಮತ್ತು ವ್ಯತ್ಯಾಸವನ್ನು ಬರೆಯಿರಿ.

18. ಗಾಯನ ಸಮಯವನ್ನು ಉದಾಹರಣೆಯೊಂದಿಗೆ ವಿವರಿಸಿ.

19. ಕೆಹರುವಾ ತಾಳದ ಮಾಹಿತಿಯನ್ನು ಠೇಕಾದೊಂದಿಗೆ ಬರೆಯಿರಿ.

20. ಭೀಮ್‌ಫಲಾಸ್ ರಾಗವು ಕಾಫಿ ರಾಗಕ್ಕಿಂತ ಭಿನ್ನವಾಗಿದೆ. ಹೇಗೆ ?

21. ಪಂಡಿತ್ ವಿಷ್ಣುನಾರಾಯಣ ಭಾತಖಂಡೆಯವರು ಸಂಗೀತವನ್ನು ಹೇಗೆ ಬೆಳೆಸಿದರು ?

22. ಸಂಗೀತಗಾರರಿಗೆ ಶ್ರವಣ ಜ್ಞಾನವು ಬಹಳ ಪ್ರಮುಖವಾದುದು. ಹೇಗೆ ?

23. ಕೆಳಗೆ ಕೆಲವು ಸ್ವರ ಗುಂಪುಗಳನ್ನು ನೀಡಲಾಗಿದೆ. ಅವು ಎಂತಹ ಸ್ವರಗಳು ಎಂಬುವುದನ್ನು ವರ್ಗೀಕರಿಸಿ :

ನಿ̣ ಧ̣ ಫ̣ ಮ̣, ಸ̇ ರಿ̇ ಗ̇ ಮ̇, ಪ ಮ ಗ ರಿ, ರಿ̲ ಗ̲ ಧ̲ ನಿ̲

IV. **ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

24. ಭೈರವ್ ರಾಗದ ಸ್ವರಗೀತೆಯನ್ನು ತೀನ್‌ತಾಳದಲ್ಲಿ ಸ್ವರಲಿಪಿ ಬದ್ಧಗೊಳಿಸಿ. 6

25. ಖಯಾಲ್ ಗಾಯನವು ಧ್ರುಪದ್ ಗಾಯನಕ್ಕಿಂತ ಭಿನ್ನವಾಗಿದೆ ವಿವರಿಸಿ. 4